## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಓ ಎಸ್ ಸಂಖ್ಯೆ 06/2021

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ. ಎಂ. ಜಿ ಸತೀಶ್ ಕುಮಾರ್ | ಡಿಡಬ್ಲ್ಯೂ : 1 |
| ತಂದೆಯ / ಗಂಡನ ಹೆಸರು | : ಲೇಟ್ ಡಾ. ಎಂ. ವಿ. ಗೋವಿಂದಪ್ಪ | |
| ವಯಸ್ಸು | : 55 ವರ್ಷ | |
| ಉದ್ಯೋಗ | : ಮೆಡಿಕಲ್ ಡಾಕ್ಟರ್, ಕನ್ಸಲ್ಟೆಂಟ್ ಫಿಸಿಷಿಯನ್, ಮಣಿಪಾಲ್ ಆಸ್ಪತ್ರೆ , ಮೈಸೂರು | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 19.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಶ್ರೀ ಡಿ.ಎನ್.ಜಿ ವಕೀಲರಿಂದಃ

1. ನನ್ನ ವಿದ್ಯಾರ್ಹತೆ ಎಂ.ಬಿ.ಬಿ.ಎಸ್, ಎಂ. ಡಿ ಇನ್ ಇಂಟರ್ನಲ್ ಮೆಡಿಷನ್. ಕಳೆದ 30 ವರ್ಷಗಳಿಂದ ನಾನು ವೈದ್ಯಕೀಯ ವೃತ್ತಿ ನಡೆಸುತ್ತಿದ್ದೇನೆ. ಈ ಪ್ರಕರಣದ ಪ್ರತಿವಾದಿ ಡಾ. ಸಿ ಬಿ ಮೂರ್ತಿ ರವರ ಪರಿಚಯ ನನಗೆ ಇರುತ್ತದೆ. ನಾನು ಹುಟಿದಾಗಿನಿಂದಲೂ ಅವರ ಪರಿಚಯ ಇರುತ್ತದೆ. ಅವರು ನನ್ನ ಸಂದತೆ ಸ್ನೇಹೀತರು. ನನ್ನ ವಿದ್ಯಾಭ್ಯಾಸದ ನಂತರ ನಾನು ಅವರ ಆಸ್ಪತ್ರೆಯಲ್ಲಿ ವೈದ್ಯನಾಗಿ ಕೆಲಸ ಕೂಡ ಮಾಡಿರುತ್ತೇನೆ. ಆ ಆಸ್ಪತ್ರೆಯ ಹೆಸರು "ಬಸಪ್ಪ ಮೆಮೊರಿಯಲ್ ಹಾಸ್ಪಿಟಲ್ " , ಅದನ್ನು ಬಿ .ಎಮ. ಹಾಸ್ಪಿಟಲ್ ಎಂತಲೂ ಕರೆಯುತ್ತಿದ್ದರು. ಆ ಆಸ್ಪತ್ರೆ ಮೈಸಡೂರಿನಲ್ಲಿ ಇತ್ತು.

2. ಸಿ ಬಿ ಲೀಲಾವತಿ ರವರು ಡಾ. ಸಿ ಬಿ ಮೂರ್ತಿ ರವರ ತಂಗಿ. ಅಲ್ಲದೇ ನಾನು ಕಾಲೀಜಿನಲ್ಲಿ ಓದುತ್ತಿದ್ದಾಗ ಅವರು ನನಗೆ ಕನ್ನಡ ಪ್ರೊಪೆಸರ್ ಕೂಡ ಆಗಿದ್ದರು.

3. ನಂತರದಲ್ಲಿ ಅವರು ಪೇಷ್ಟೆಂಟ್ ಆಗಿ ನನ್ನ ಆಸ್ಪತ್ರೆಗೆ ಅಂದರೆ ಬಿ.ಎಂ. ಆಸ್ಪತ್ರೆಗೆ ಬಂದು ನನ್ನಿಂದ ಚಿಕಿತ್ಸೆಯನ್ನು ಪಡೆದಿರುತ್ತಾರೆ . ಸದರಿ ಬಿ ಎಂ. ಆಸ್ಪತ್ರೆಯಲ್ಲಿ ನಾನು 1996-2017 ರವರೆಗೂ ವೈದ್ಯನಾಗಿ ಸೇವೆ ಸಲ್ಲಿಸಿರುತ್ತೇನೆ. ಅದೇ ಆಸ್ಪತೆರಯಲ್ಲಿ ನನ್ನ ತಂದೆಯೂ ಸಹ ವೈದ್ಯರಾಗಿದ್ದರು. ಅವರು ಫಿಶಿಷಿಯನ್ ಆಗಿದ್ದರು.

4. ಚಿಕ್ಕದಿಂನಿಂದಲೂ ನನಗೆ ಸಿ ಬಿ ಮೂರ್ತಿ ರವರ ಪರಿಚಯ ಇದ್ದುರಿಂದ , ಅವರ ಕುಟುಂಬದವರ ಪರಿಚಯ ಸಹ ನನಗೆ ಇರುತ್ತದೆ. ನನ್ನ ತಂದೆ ಕೂಡ ಸಿ ಬಿ ಲೀಲಾವತಿ ರವರಿಗೆ ಚಿಕಿತ್ಸೆಯನ್ನು ನೀಡಿರುತ್ತಾರೆ . ಆಕೆಗೆ **type** 2 **diabetes mellitus** ನಿಂದ ಬಳಲುತ್ತಿದ್ದರು. ಸುಮಾರು 30 ವರ್ಷಗಳಿಂದ ಅವರು ಈ ಖಾಯಿಲೆಯಿಂದ ಬಳಲುತ್ತಿದ್ದರು.

5. 2015 ರಲ್ಲಿ ಸಿ ಬಿ ಲೀಲಾವತಿ ಮೃತಪಟ್ಟರು. ಆಕೆ ಮೃತ ಪಡುವ ಮೊದಲು ಆಕೆಗೆ ನಾನೇ ಖುದ್ದು ಚಿಕಿತ್ಸೆಯನ್ನು ಅನೇಕ ಬಾರಿ ನೀಡಿರುತ್ತೇನೆ. **type** 2 **diabetes mellitus - diabetic keto acidosis**, ಕಾರಣದಿಂದ ಆಕೆ ಮೃತಪಟ್ಟರು. ಕೆಲವೂಮ್ಮೆ ಆಕೆಗೆ ದೇಹದಲ್ಲಿ ಸಕ್ಕರೆ ಕಡಿಮೆಯಾಗಿ **Hypoglycemia** ಉಂಟಾಗಿ ಆಸ್ಪತ್ರೆ ಸೇರುತ್ತಿದ್ದರು. ಆಗಲೂ ಸಹ ನಾನೇ ಚಿಕಿತ್ಸೆ ನೀಡಿರುತ್ತೇನೆ. ಅವರು ಮೃತಪಡುವ 4-5 ವರ್ಷಗಳ ಹಿಂದಿನಿನಿಂದಲೂ ಮೇಲ್ಕಂಡ **complications** ನಿಂದ ಬಳಲುತ್ತಿದ್ದರು.

6. **Hypoglycemia** ದಿಂದ ಬಳಲುವಾಗ ಆಕೆಗೆ ವಿಪರೀತವಾಗಿ ಮೈ ಬೆವರುವುದು, ತುಂಬಾ ಹಸಿವಾಗುವುದು , ಮಂಕಾಗಿರುವುದು, ಕಣ್ಣಿನ ದೃಷ್ಟಿ ಚೆನ್ನಾಗಿ ಕಾಣದೇ ಇರುವುದು , ನಿರ್ಧಾರಗಳನ್ನು ತೆಗೆದುಕೊಳ್ಳಲು ಆಗದೇ ಇರುವುದು ಉಂಟಾಗುತ್ತಿತ್ತು. ಇವೆಲ್ಲಾ ವಿಪರೀತವಾದಾಗ ವ್ಯಕ್ತಿ ಕೋಮಾ ಸ್ಥಿತಿ ತಲುಪುತ್ತಾನೆ.

7. **diabetic keto acidosis** ಆದಾಗ ಹೃದಯಬಡಿತ ಹೆಚ್ಚಾಗುವುದು , ಮೈ ಬೆವರುವುದು , ಉಸಿರಾಟದಲ್ಲಿ ಏರುಪೇರಾಗುವುದು, ಮಂಕುತನ, ನಿರ್ಧಾರಗಳನ್ನು ತೆಗೆದುಕೊಳ್ಳಲು ಆಗದೇ ಇರುವುದು ಉಂಟಾಗುತ್ತದೆ. ವೆಲ್ಲಾ ವಿಪರೀತವಾದಾಗ ವ್ಯಕ್ತಿ ಕೋಮಾ ಸ್ಥಿತಿ ತಲುಪುತ್ತಾನೆ.

8. ಸಿ ಬಿ ಲೀಲಾವತಿ ಅವರು ಸಕ್ಕರೆ ಖಾಯಿಲೆ ಹತೋಟಿಗೆ ಬಾರದೇ ಅಂದರೆ ಆಕೆ ಸರಿಯೂಗಿ ಮಾತ್ರೆ ಔಷಧಿಗಳನ್ನು ತೆಗೆದುಕೊಳ್ಳದೇ ಇದುದರಿಂದ , ಹತೋಟಿಗೆ ಬಾರದೇ ಬಳಲುತ್ತಿದ್ದರು. ಮಾನಸಿಕ ಒತ್ತಡಗಳಿದ್ದರೂ ಸಹ , ಶರೀರದಲ್ಲಿ ಇನ್ಫೆಕ್ಷನ್ ಆಗಿದ್ದರೂ ಸಹ, ಮೇಲೆ ಹೇಳಿದ **Hypoglycemia** ಮತ್ತು **diabetic keto acidosis** ಉಂಟಾಗುತ್ತದೆ. ಸಿ ಬಿ ಲೀಲಾವತಿಯವರು ಸರಿಯಾಗಿ ಔಷದಿ ಮಾತ್ರೆಗಳನ್ನು ತೆಗೆದುಕೊಳ್ಳದೇ ಇರುತ್ತಿದುದರಿಂದ **Hypoglycemia** ಮತ್ತು **diabetic keto acidosis** ದಿಂದ ಬಳಲುತ್ತಿದ್ದರು.

9. ಸಿ ಬಿ ಮೂರ್ತಿ ಮತ್ತು ಸಿ ಬಿ ಲೀಲಾವತಿ ಅಣ್ಣ ತಂಗಿಯಾಗಿದ್ದರು. ಆಕೆ ಹುಷಾರು ತಪ್ಪಿದಾಗಲೆಲ್ಲಾ ಆಕೆಯನ್ನು ಅವರೇ ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸುತ್ತಿದ್ದರು ಮತ್ತು ನನನಗೆ ದಿನಕ್ಕೆ 3–4 ಬಾರಿ ಫೋನ್ ಮಾಡಿ ಆಕೆಯ ಆರೋಗ್ಯ ಸ್ಥಿತಿ ಹೇಗಿದೆ ಎಂದು

ವಿಚಾರಿಸಿಕೊಳ್ಳುತ್ತಿದ್ದರು. ಅವರಿಬ್ಬರ ಸಂಬಂಧ ಅನ್ಯೋನ್ಯವಾಗಿತ್ತು. ಡಾ. ಸಿ ಬಿ ಮೂರ್ತಿ ಯವರು ಸದರಿ ಆಸ್ಪತ್ರೆಯ ಮಾಲೀಕರು ಮತ್ತು ಡೈರೆಕ್ಟರ್ ಆಗಿದ್ದರು.

10. ಒಂದೆರೆಡು ಬಾರಿ ಫೋನ್ ಬಂದಾಗ ನಾನು ಖುದ್ದು ಮನೆಗೆ ಹೋಗಿ ಆಕೆಯನ್ನು ನೋಡಿ ನಂತರ ಕಾರಿನಲ್ಲಿ ಅಥವಾ ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸುತ್ತಿದ್ದೇವು. ಜೊತೆಯಲ್ಲಿ ಡಾ.ಸಿ ಬಿ ಮೂರ್ತಿ ಯವರು ಸಹ ಇರುತ್ತಿದ್ದರು. ನಾನು ಅವರಿಗೆ ಚಿಕಿತ್ಸೆಯನ್ನು ನೀಡಿದ ಬಾಬ್ತು ದಾಖಲಾತಿಗಳು ಆಸ್ಪತ್ರೆಯಲ್ಲಿವೆ. ಆಸ್ಪತ್ರೆಯ **Administration Section** ರವರು ಆ ದಾಖಲಾತಿಗಳನ್ನು ಹಾಜರುಪಡಿಸಬಹುದಾಗಿರುತ್ತದೆ.

11. **Hypoglycemia** ಸ್ಥಿತಿಯಲ್ಲಿ ಇದ್ದಾಗ ಆಕೆಗೆ ತಾನು ಏನು ಕೆಲಸ ಮಾಡುತ್ತಿದ್ದೇನೆ ಎನ್ನುವ ಬಗ್ಗೆ ಗಮನ ಕಡಿಮೆ ಇರುತ್ತದೆ. ಇಂತಹ ಸ್ಥಿತಿಯಲಿಲ ಆಕೆಗೆ ಯಾರಾದರೂ ಯಾವುದಾದರೂ ಸುರಾಚನೆಯನ್ನು ಕೊಟ್ಟಲ್ಲಿ , ಆಕೆ ಆ ಸೂಚನೆಯಂತೆ ಮಾಡುವ ಸಂಭವ ಇತ್ತು ಎನ್ನುವುದು ಸರಿ.

12. ನನಗೆ ಸಿ ಆರ್ ವಿಶ್ವಪ್ರಕಾಶ್ ಮತ್ತು ಆರ್ ಯೋಗಿನಿ ಎನ್ನುವವರ ಪರಿಚಯ ಇರುವುದಿಲ್ಲ.

<u>ಮುಂದುವರಿದ ಮುಖ್ಯವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು</u>.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**

ಮೈಸೂರು.